<u>ಎಫ್ ಡಿ ಪಿ ನಂಃ**- 01/2016**</u>                    ಆರ್.ಡಬ್ಲ್ಯೂ**:-1**

ದಿನಾಂಕಃ **21-02-2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು :- ಅರ್ಜಿದಾರರ ಪರ ವಕೀಲರಿಂದ :-</u>

ನನಗೆ ಸೇರಿದ 2 ಎಕರೆ 35 ಗುಂಟೆ ಜಮೀನು ಇರುತ್ತದೆ. ಆದರೆ ಅದರ ಸರ್ವೇ ನಂಬರ್ ನನಗೆ ಈಗ ನೆನಪಿಲ್ಲ. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಅಸಲು ದಾವಾ ಸಂಖ್ಯೆ 181/2013 ರಲ್ಲಿ 8 ನೇ 1 ಭಾಗಾಂಶದ ಆದೇಶವಾಗಿದೆ ಎಂದರೆ ಸರಿ. ನನ್ನ ಮಾವ ಮಲ್ಲಪ್ಪರವರಿಗೆ 7 ಜನ ಮಕ್ಕಳು ಅಂದರೆ ಗಂಗಮ್ಮ, ಚಂದ್ರಮ್ಮ, ಮಹೇಶ್ವರಪ್ಪ, ಶಾರದಮ್ಮ, ಬೋರಮ್ಮ, ಸಾಕಮ್ಮ ಮತ್ತು ಈಶ್ವರಪ್ಪ. ನನ್ನ ಅತ್ತೆಯ ಹೆಸರು ಕಮಲಮ್ಮ. ಅಸಲು ದಾವಾ ಸಂಖ್ಯೆ 181/2013 ದಾವೆಯನ್ನು ಸಲ್ಲಿಸುವ ಸಮಯದಲ್ಲಿ ನಮ್ಮ ಅತ್ತೆ ಜೀವಂತವಾಗಿದ್ದರು. ನಿಪಿ-1 ನೊಂದಾಯಿತ ಮರಣ ಶಾಸನದಲ್ಲಿ ಸಾಕ್ಷಿಯು ತನ್ನ ಅತ್ತೆಯ ಭಾವಚಿತ್ರವನ್ನು ನೋಡಿ ಗುರುತಿಸಿರುತ್ತಾರೆ. ನಮ್ಮ ಅತ್ತೆಗೆ ಸಹಿ ಮಾಡಲು ಬರುವುದಿಲ್ಲ, ಎಡಗೈ ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತಾರೆ. 8 ನೇ 1 ಭಾಗ ಅಂದರೆ ತಲಾ ಒಬ್ಬರಿಗೆ 14.08 ಗುಂಟೆ ಜಮೀನು ಬರುತ್ತದೆ ಎಂದರೆ ಸರಿ. ನನ್ನ ಅತ್ತೆ ಕಮಲಮ್ಮ ತನಗೆ ಬಂದಂತಹ ಭಾಗಾಂಶದ ಹಕ್ಕನ್ನು ಈಶ್ವರಪ್ಪನಿಗೆ ಸೇರಬೇಕೆಂದು ನಿಪಿ-1 ಮರಣ ಶಾಸನವನ್ನು ಬರೆದಿಟ್ಟಿದ್ದಾರೆ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ಸಾಕ್ಷಿದಾರರಾಗಿ ಸಹಿ ಮಾಡಿದ ಮಾದಪ್ಪ ಬಿನ್ ಯಂಕಪ್ಪ ನನ್ನ ನಾದಿನಿಯ ಗಂಡ, ಚಂದ್ರಮ್ಮ ಕೋಂ ಈಶ್ವರಪ್ಪ ನನ್ನ ಗಂಡನ ಅಕ್ಕನಾಗಬೇಕು. ನನ್ನ ಅತ್ತೆ ಕಮಲಮ್ಮ ಮುಂದೆ ಯಾವುದೇ ತಕರಾರು ಬರಬಾರದು ಎಂಬ ಉದ್ದೇಶದಿಂದ ನಿಪಿ-1 ಮರಣ ಶಾಸನದಲ್ಲಿ ತನಗೆ ಭಾಗಾಂಶದ ಮೂಲಕ ಬಂದಂತಹ ಆಸ್ತಿಯನ್ನು ಅರ್ಜಿದಾರರ ಹೆಸರಿಗೆ ಬರೆದಿದ್ದಾರೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಮೂದಾಗಿರುವ ವಿಚಾರಗಳು ನನಗೆ ಗೊತ್ತು. 8 ನೇ 1 ಭಾಗಾಂಶದ ಆದೇಶಕ್ಕೆ ನನ್ನದು ಯಾವುದೇ ತಕರಾರು ಇಲ್ಲ ಎಂದರೆ

ಸರಿಯಲ್ಲ. ಸಾಕ್ಷಿಯು ಮುಂದುವರೆದು 8 ನೇ 1 ಭಾಗಾಂಶದ ಬದಲಾಗಿ 7 ನೇ 1 ಭಾಗಾಂಶ ಆಗಬೇಕು ಎಂದು ನುಡಿಯುತ್ತಾರೆ. ಅರ್ಜಿದಾರ ನನಗೆ ಮೈದುನನಾಗಬೇಕು. ನಿಪಿ-1 ಮರಣ ಶಾಸನವನ್ನು ನನ್ನ ಅತ್ತೆ ತನ್ನ ಆರೋಗ್ಯ ಸರಿ ಇದ್ದ ಸಮಯದಲ್ಲಿ ಮತ್ತು ತನ್ನ ಸ್ವ ಇಚ್ಚೆಯಿಂದ ಬರೆದುಕೊಟ್ಟಂತಹ ಮರಣ ಶಾಸನವಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ-1 ಮರಣ ಶಾಸನವನ್ನು ಬರೆದುಕೊಡುವ ಸಮಯದಲ್ಲಿ ನನ್ನ ಅತ್ತೆ ಆರೋಗ್ಯವಾಗಿದ್ದರು ಮತ್ತು ತಿಳುವಳಿಕೆ ಜ್ಞಾನ ಇತ್ತು ಎಂದರೆ ಸರಿಯಲ್ಲ. ನಿಪಿ-1 ಮರಣ ಶಾಸನವನ್ನು ಬರೆದುಕೊಡುವ ಸಮಯದಲ್ಲಿ ನನ್ನ ಅತ್ತೆಯ ಆರೋಗ್ಯ ಸರಿ ಇಲ್ಲದ ಬಗ್ಗೆ ಮತ್ತು ಹಾಸಿಗೆಯನ್ನು ಹಿಡಿದಿರುವ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಈ ಪ್ರಕರಣದಲ್ಲಿ ಕೋರ್ಟ್ ಕಮಿಷನರ್ ರವರು ನೀಡಿದ ನೋಟೀಸನ್ನು ಪಡೆದುಕೊಂಡಿರುತ್ತೇನೆ. ತದನಂತರ ನ್ಯಾಯಾಲಯದಲ್ಲಿ ತಕರಾರನ್ನು ಸಲ್ಲಿಸಿದ್ದೇನೆ ಎಂದು ನುಡಿಯುತ್ತಾರೆ. ಕೋರ್ಟ್ ಕಮಿಷನರ್ ರವರು  ಅಸಲು ದಾವಾ ಸಂಖ್ಯೆ 181/2013 ರಲ್ಲಿ ಆದಂತೆ ವರದಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೇ ದಾಖಲೆಗಳಿಗೆ ನಾನು ಸಹಿಯನ್ನು ಮಾಡಿರುವುದಿಲ್ಲ. ಕೋರ್ಟ್ ಕಮಿಷನರ್ ರವರಿಂದ ಒಂದು ಸಲ ನೋಟೀಸನ್ನು ಪಡೆದುಕೊಂಡಿರುತ್ತೇನೆ. ಆದರೆ ಅದು ಯಾವಾಗ ಎಂದು ನನಗೆ ನಿರ್ದಿಷ್ಟವಾಗಿ ನೆನಪಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶಕೋರಿದ್ದು ನೀಡಿ ಮುಂದೂಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.